ಓಎಸ್ 282/2022

ಪಿಡಬ್ಲ್ಯೂ 1

**ಸಾಕ್ಷಿಯು ದಿಃ 13.10.2025 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

**<u>ಪಾಟೀ ಸವಾಲು: ಪ್ರತಿವಾದಿ ಪರ ವಕೀಲರಿಂದ</u>**

ದಾವ ಆಸ್ತಿಯು ನನ್ನ ಅಜ್ಜಿಯಿಂದ ನನಗೆ ಬಂದಿರುತ್ತದೆ. ದಾವ ಆಸ್ತಿಯು ನನ್ನ ಅಜ್ಜಿಗೆ ಹೇಗೆ ಬಂದಿತ್ತು ಎಂದು ತಿಳಿದುಕೊಂಡಿಲ್ಲ. ದಾವ ಆಸ್ತಿಯು ನಮ್ಮ ಅಜ್ಜಿಗೆ ಹೇಗೆ ಬಂದಿರುತ್ತದೆ ಎಂದು ನಾನು ದಾಖಲೆಯನ್ನು ನೋಡಿಲ್ಲ. ಸದರಿ ದಾಖಲೆಗಳನ್ನು ನೋಡಲು ತೊಂದರೆ ಇತ್ತಾ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸರ್ವೇ ನಂಬರ್ 62/1 ರಲ್ಲಿ 3 ಎಕರೆ 27 ಗುಂಟೆ ಜಮೀನು ಇರುತ್ತದೆ. ಸರ್ವೇ ನಂಬರ್ 62/1 ಜಮೀನು ನನ್ನ ಹೆಸರಿನಲ್ಲಿ ಖಾತೆ ಇದೆ. ಸರ್ವೇ ನಂಬರ್ 62/1, 3 ಎಕರೆ 27 ಗುಂಟೆ ಮಾತ್ರ ನನಗೆ ಸೇರಿದ್ದು, ದಾವ ಆಸ್ತಿ ನನಗೆ ಸೇರಿದಲ್ಲ ಎಂದರೆ ಸರಿಯಲ್ಲ. ನನ್ನ ಅಜ್ಜಿ ಭೋಗಮ್ಮ ರವರು ಮೃತಪಟ್ಟು ಸುಮಾರು 50 ವರ್ಷಗಳು ಕಳೆದಿವೆ. ನನ್ನ ಅಜ್ಜಿಯ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿರುವುದಿಲ್ಲ.

2. ಪ್ರತಿವಾದಿ ಗೋವಿಂದಶೆಟ್ಟಿ ರವರ ತಾತ ರಂಗಶೆಟ್ಟಿ ನನಗೆ ಗೊತ್ತಿಲ್ಲ. ಸದರಿ ರಂಗಶೆಟ್ಟಿ ರವರ ಹೆಂಡತಿ ಹೆಸರು ಭೋಗಮ್ಮ ಎಂದರೆ ಸರಿಯಲ್ಲ. ದಾವ ಆಸ್ತಿಯು ಸದರಿ ರಂಗಶಟ್ಟಿ ರವರಿಗೆ ಸರ್ಕಾರದಿಂದ ಮಂಜೂರಾಗಿದೆ ಎಂದರೆ ಸರಿಯಲ್ಲ. ದಿಃ 28.02.1950 ರಲ್ಲಿಯೇ ರಂಗಶೆಟ್ಟಿ ರವರಿಗೆ ದಾವ ಆಸ್ತಿಯು ಸರ್ಕಾರದಿಂದ ಮಂಜೂರಾಗಿದೆ ಎಂದರೆ ಸುಳ್ಳು. ಸದರಿ ರಂಗಶೆಟ್ಟಿ ರವರು ದಾವ ಆಸ್ತಿ ಮಂಜೂರಾಗುವ ಮುಂಚಿನಿಂದಲೂ ಮತ್ತು ನಂತರವು ದಾವ ಆಸ್ತಿಯ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಸದರಿ ರಂಗಶೆಟ್ಟಿ ಮೃತಪಟ್ಟ ನಂತರ ದಾವ ಆಸ್ತಿಯು ಅವರ ಹೆಂಡತಿ ಭೋಗಮ್ಮ ರವರ ಹೆಸರಿಗೆ ಖಾತೆಯಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಭೋಗಮ್ಮ ರವರನ್ನು ನನ್ನ ಅಜ್ಜಿ ಭೋಗಮ್ಮ ಎಂದು ಸುಳ್ಳು ಹೇಳಿ ಖಾತೆ

ಮಾಡಿಸಿಕೊಳ್ಳಲು ಪ್ರಯತ್ನಪಟ್ಟಿರುತ್ತೇನೆ ಎಂದರೆ ಸರಿಯಲ್ಲ. ದಾವ ಆಸ್ತಿಯು ನನ್ನ ಹೆಸರಿಗೆ ಖಾತೆಯಾಗಿ ಸುಮಾರು 50 ವರ್ಷಗಳು ಕಳೆದಿದೆ. ನಿಪಿ-1 ರಂತೆ ಖಾತೆ ಬದಲಾವಣೆಗೆ ಅರ್ಜಿ ಸಲ್ಲಿಸಿದಾಗ ದಾವ ಆಸ್ತಿಯು ನನ್ನ ತಂದೆಗೆ ಕ್ರಯದ ಮೂಲಕ ಬಂದಿದೆ ಎಂದು ಅರ್ಜಿಯಲ್ಲಿ ನಮೂದು ಮಾಡಲಾಗಿದೆ ಎಂದರೆ ಸರಿಯಲ್ಲ. ನಿಪಿ-1 ರಂತೆ ಹಕ್ಕು ಬದಲಾವಣೆಯಾಗಲು ಯಾರು ಅರ್ಜಿ ಸಲ್ಲಿಸಿದ್ದರು ಎಂದರೆ ಸಾಕ್ಷಿಯ ನಮ್ಮ ಅಜ್ಜಿ ತಹಶೀಲ್ದಾರ್ ರವರ ಕಛೇರಿಯಲ್ಲಿ ನಮ್ಮ ಹೆಸರಿಗೆ ಬರೆದುಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ದಾವ ಆಸ್ತಿ ನಮ್ಮದಲ್ಲದ ಕಾರಣ ನಿಪಿ-1 ಹಕ್ಕು ಬದಲಾವಣೆ ಆದೇಶವಾದರೂ ಸಹ ದಾವ ಆಸ್ತಿಯ ಖಾತೆ ನನ್ನ ಹೆಸರಿಗೆ ಬಂದಿರುವುದಿಲ್ಲ ಎಂದರೆ ಸಾಕ್ಷಿಯು ಸೆಕ್ರೇಟರಿ ತಕರಾರು ಸಲ್ಲಿಸಿದ್ದರಿಂದ ಖಾತೆಯಾಗಿಲ್ಲ ಎಂದು ನುಡಿಯುತ್ತಾರೆ.

3. 2017-18ನೇ ಸಾಲಿನಲ್ಲಿ ದಾವ ಆಸ್ತಿಯ ಪೌತಿ ಖಾತೆ ಬದಲಾವಣೆ ಕೋರಿ ಕಂದಾಯ ಇಲಾಖೆಗೆ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸುಳ್ಳು. ಪ್ರತಿವಾದಿಯು ಖಾತೆ ಬದಲಾವಣೆ ಕೋರಿ ಸಲ್ಲಿಸಿದ ಅರ್ಜಿಗೆ ನಾನು ತಕರಾರು ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿ. ಸದರಿ ತಕರಾರು ಅರ್ಜಿಯಲ್ಲಿ ನಾನು ದಾವ ಆಸ್ತಿಯನ್ನು ನನ್ನ ತಂದೆ ಖರೀದಿ ಮಾಡಿರುವ ಆಸ್ತಿ ಎಂದು ತಿಳಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ತಕರಾರು ಅರ್ಜಿ ಸಲ್ಲಿಸಿದ ನಂತರವೂ ಕ್ರಯಪತ್ರ ದಾಖಲೆಗಳನ್ನು ತಹಶೀಲ್ದಾರ್ ರವರಿಗೆ ಸಲ್ಲಿಸದ ಕಾರಣ ಖಾತೆ ವರ್ಗಾವಣೆ ಮಾಡದೇ ಯತಾಸ್ಥಿತಿಯಲ್ಲಿರುವಂತೆ ಆದೇಶ ಮಾಡಿದ್ದಾರೆ ಎಂದರೆ ಸುಳ್ಳು. ಸದರಿ ತಹಶೀಲ್ದಾರ್ ರವರ ಆದೇಶದ ವಿರುದ್ಧ ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಆರ್.ಎ. 401/2019 ರಂತೆ ಮೇಲ್ಮನವಿ ಸಲ್ಲಿಸಿದ್ದೆ ಎಂದರೆ ಸರಿ. ತಹಶೀಲ್ದಾರ್ ರವರು ಪ್ರತಿವಾದಿಯ ಹೆಸರಿಗೆ ಖಾತೆ ವರ್ಗಾವಣೆ ಮಾಡದೇ ಯತಾಸ್ಥಿತಿಯಲ್ಲಿರುವಂತೆ ಆದೇಶ ಮಾಡಿದ ಕಾರಣ ಪ್ರತಿವಾದಿಯು ಸಹ ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಆರ್.ಎ. 48/2020 ರಂತೆ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಎರಡೂ ಮೇಲ್ಮನವಿಗಳನ್ನು ಒಟ್ಟಿಗೆ ಪರಿಗಣಿಸಿ ಉಪವಿಭಾಗಾಧಿಕಾರಿಗಳು ಆದೇಶ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಉಪವಿಭಾಗಾಧಿಕಾರಿಗಳ ನ್ಯಾಯಾಲಯ ದಲ್ಲಿ ನಮ್ಮ ಆಸ್ತಿಗೆ ಸಂಬಂಧಪಟ್ಟ ದಾಖಲೆಗಳನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿ. ಪ್ರತಿವಾದಿಯು ಸಹ ಉಪವಿಭಾಗಾಧಿಕಾರಿಗಳ

ನ್ಯಾಯಾಲಯದಲ್ಲಿ ಅವರ ಆಸ್ತಿಗೆ ಸಂಬಂಧಪಟ್ಟ ದಾಖಲೆಗಳನ್ನು ಹಾಜರುಪಡಿಸಿದ್ದರು ಎಂದರೆ ಸರಿ. ಸದರಿ ಎರಡೂ ದಾಖಲಾತಿಗಳನ್ನು ಪರಿಶೀಲಿಸಿ ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಪ್ರತಿವಾದಿಯ ಪರವಾಗಿ ಆದೇಶವಾಗಿರುತ್ತದೆ ಎಂದರೆ ಸರಿಯಲ್ಲ. ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಪ್ರತಿವಾದಿಯ ಪರವಾಗಿ ಆದೇಶವಾದ ಕಾರಣ ಅದನ್ನು ಪ್ರಶ್ನಿಸಿ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಆರ್ .ಎ. 63/2022–23 ರಂತೆ ಮೇಲ್ಮನವಿ ಸಲ್ಲಿಸಿದ್ದೆ ಎಂದರೆ ಸರಿ. ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಮೇಲ್ಮನವಿ ಏನೆಂದು ಆದೇಶವಾಗಿದೆ ಎಂದು ತಿಳಿದುಕೊಂಡಿಲ್ಲ. ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿಯೂ ಸಹ ಮೇಲ್ಮನವಿ ಪ್ರತಿವಾದಿ ಪರ ಆದೇಶವಾಗಿದೆ ಎಂದರೆ ಸುಳ್ಳು . ಕಂದಾಯ ನ್ಯಾಯಾಲಯಗಳಲ್ಲಿ ಪ್ರತಿವಾದಿಪರ ಆದೇಶವಾಗಿದ್ದರು ಸಹ ದಾವ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಮತ್ತು ಪ್ರತಿವಾದಿಗೆ ತೊಂದರೆ ಕೊಡಲು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವ ಆಸ್ತಿಯ ಮೇಲೆ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯು ದಾವ ಆಸ್ತಿಯ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ.

4. ದಿಃ 12.11.2022 ರಂದು ಪ್ರತಿವಾದಿಯು ನಾನು ಉಳುಮೆ ಮಾಡುವಾಗ ತೊಂದರೆ ಕೊಟ್ಟಿದ್ದಾರೆ ಎಂದು ಸಾಕ್ಷಿ ಪ್ರಮಾಣ ಪತ್ರದಲ್ಲಿ ತಿಳಿಸಿದ್ದು, ಆ ಬಗ್ಗೆ ಪೊಲೀಸರಿಗೆ ದೂರು ನೀಡಿಲ್ಲ. ಆ ರೀತಿ ದೂರು ನೀಡಲು ತೊಂದರೆ ಇರಲಿಲ್ಲ ಎಂದರೆ ಸರಿ. ಪ್ರತಿವಾದಿಯು ನನಗೆ ಯಾವುದೇ ರೀತಿಯ ತೊಂದರೆ ಕೊಟ್ಟಿಲ್ಲ ಮತ್ತು ನಾನು ಪ್ರತಿವಾದಿಗೆ ತೊಂದರೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ದಾವ ಆಸ್ತಿಯು ನನಗಾಗಲಿ, ನನ್ನ ಪೂರ್ವಜ್ಜರಿಗಾಗಲಿ ಸ್ವಯಾರ್ಜಿತ ಅಥವಾ ಪಿತ್ರಾರ್ಜಿತ ಆಸ್ತಿ ಅಲ್ಲ ಎಂದರೆ ಸರಿಯಲ್ಲ. ದಾವ ಆಸ್ತಿಯು ನನ್ನ ಸ್ವಯಾರ್ಜಿತ ಅಥವಾ ಪಿತ್ರಾರ್ಜಿತ ಆಸ್ತಿ ಎಂಬುದರ ಕುರಿತಾಗಿ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಪ್ರತಿವಾದಿ ಬೇರೆ ಬೇರೆ ಜನಾಂಗಕ್ಕೆ ಸೇರಿದವರು ಎಂದರೆ ಸರಿ.

5. ನಿಪಿ–5 ದಾಖಲೆ ಪ್ರಕಾರ ದಾವ ಆಸ್ತಿಯು ಪ್ರತಿವಾದಿಯ ತಾತ ರಂಗಶೆಟ್ಟಿ ರವರಿಗೆ ದರಕಾಸ್ತು ಮೂಲಕ ಬಂದಿರುತ್ತದೆ ಎಂದು ನಮೂದಿದೆ ಎಂದರೆ ಸರಿಯಲ್ಲ. ನಿಪಿ– 12 ಕ್ಕೂ ಈ ದಾವ ಆಸ್ತಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ದಾವ ಆಸ್ತಿಯು ಪ್ರತಿವಾದಿಗೆ ಸೇರಿದ್ದು ಎಂದರೆ ಸರಿಯಲ್ಲ. ದಾವ ಆಸ್ತಿಯು ನಮ್ಮ ಆಸ್ತಿಯ ಪಕ್ಕದಲ್ಲಿ ಇರುವುದರಿಂದ ಅದನ್ನು ಹೊಡೆದುಕೊಳ್ಳಲು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ